

ಐದು ದಶಕಗಳ ದಲಿತ ಸಾಹಿತ್ಯವಿದೆ ಎಂದುಕೊಂಡರೂ, ಅದನ್ನು ಕನ್ನಡ ಸಾಹಿತ್ಯದೊಳಗಿನ ಮೀಸಲು ಅಭ್ಯರ್ಥಿಯ ಹಾಗೆ ನೋಡದೆ, ಬೇರೆ ರೀತಿಯಲ್ಲಿ ನೋಡಲು ಸಾಧ್ಯವಿದೆಯೇ? ನವಉದಾರವಾದ ಎಲ್ಲ ನೆಲೆಗಳನ್ನು ವ್ಯಾಪಿಸಿಕೊಂಡಿರುವ ಹಾಗೆ ವಿಶ್ವವಿದ್ಯಾಲಯಗಳನ್ನೂ ಆವರಿಸಿಕೊಂಡಿದೆ. ಆದರೆ, ವಿಮರ್ಶೆಯನ್ನು ವಿಶ್ವವಿದ್ಯಾಲಯ ತನ್ನೊಡಲಲ್ಲಿಟ್ಟುಕೊಂಡಿದೆ. ಹಾಗಾಗಿಯೇ, ಸಾಹಿತ್ಯ ಎಲ್ಲಿಂದಲೇ ಸೃಷ್ಟಿಯಾದರೂ, ನವಬಂಡವಾಳವಾದವೇ ಸಾಹಿತ್ಯವನ್ನು ಸೃಷ್ಟಿಸಿದರೂ, ವಿಮರ್ಶೆ ಮಾತ್ರ ವಿಶ್ವವಿದ್ಯಾಲಯದೊಳಗಿಂದಲೇ ಬರಬೇಕು. ಅದು ವಿಶ್ವವಿದ್ಯಾಲಯಗಳು ಚಲನಶೀಲವಾದಾಗ ಮಾತ್ರ ಸಾಧ್ಯ. ನವಉದಾರವಾದಿ ಕಾಲದಲ್ಲಿನ ಸಾಹಿತ್ಯವನ್ನು ವಿಮರ್ಶಿಸುವ ಪ್ರಜ್ಞೆ ಅಲ್ಲಿಂದಲೇ ಹುಟ್ಟಬೇಕು. ಹಿಂದೆ ದಲಿತ ಪ್ರಜ್ಞೆ ಹುಟ್ಟಿದ್ದೂ ಅಲ್ಲಿಂದಲೇ ಎಂಬುದನ್ನು ಮರೆಯಬಾರದು. ಅಂತಹ ಪ್ರಜ್ಞೆಯಿಂದಲೇ, ನವಉದಾರವಾದ, ಕೋಮುವಾದ, ಜಾತಿತಾರತಮ್ಯ, ಲಿಂಗತಾರತಮ್ಯ ಎಲ್ಲವನ್ನೂ ವಿಮರ್ಶಿಸುವ ಬೆಳಕು ಅಲ್ಲಿಂದಲೇ ಮೂಡಬೇಕು. ಸಾಹಿತ್ಯ ಹಾಗೂ ಸಮಾಜ ಬೇರೆಯಲ್ಲ ಎಂಬುದನ್ನು ದಲಿತ ಚಳವಳಿ ಹಾಗೂ ದಲಿತ ಸಾಹಿತ್ಯ ತೋರಿಸಿಕೊಟ್ಟಂತೆ ವಿಮರ್ಶೋತ್ತರ ಕಾಲದ ವಿಮರ್ಶೆ ತೋರಿಸಿಕೊಡಬೇಕಾಗಿದೆ.

'ಕ್ರಿಟೀಕ್ ಅಂಡ್ ಪೋಸ್ಟ್ ಕ್ರಿಟೀಕ್' (2017) ಕೃತಿಯ ಸಂಪಾದಕರು ತಮ್ಮ ಪ್ರಸ್ತಾವನೆಯಲ್ಲಿ ಕೇಳಿರುವ ಪ್ರಶ್ನೆಗಳನ್ನು ಇಲ್ಲಿ ಕೇಳುವ ಮೂಲಕ ಈ ಪ್ರಬಂಧವನ್ನು ಮುಗಿಸುತ್ತೇನೆ. "ಹಾಗಾದರೆ, ಇಂದಿನ ವಿಮರ್ಶೆಯ ಪ್ರಸ್ತುತ ಮೌಲ್ಯಮಾಪನದ ರಾಜಕೀಯ ಕಾಳಜಿಗಳೇನು? ಬಂಡವಾಳಶಾಹಿ, ಜನಾಳ್ವಿಕೆ, ಆಮೂಲಾಗ್ರತೆ, ಕ್ರಾಂತಿ ಹಾಗೂ ಸಾಮಾಜಿಕ ಬದಲಾವಣೆಯೊಂದಿಗೆ ಅವುಗಳ ಸಂಬಂಧವೇನು? ವಿಮರ್ಶೆಯೆನ್ನುವುದು ರಾಜಕಾರಣವಾದರೆ, ಅದರ ರಾಜಕಾರಣವೇನು? ವಿಮರ್ಶಾತ್ಮಕ ವಿಶ್ಲೇಷಣೆಯ ವಿಶ್ವಾಸಾರ್ಹತೆಯನ್ನು ಕಲೆ, ಮೀಮಾಂಸೆ ಹಾಗೂ ವ್ಯಾಖ್ಯಾನಗಳ ಸಾಮಾಜಿಕ ಆಯಾಮಗಳೊಂದಿಗಿನ ಸಂಬಂಧವನ್ನು ತೊರೆಯದೆ ಪ್ರಶ್ನಿಸಲು ಸಾಧ್ಯವೇ?"

●